ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821–2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

**Company Identity Number (CIN):U40109KA2004SGC035177**

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2023–24/ ಛಸ . 1225 ದಿನಾಂಕ: 08 JAN 2024

## –: ಸಭೆಯ ನಡಾವಳಿಗಳು :–

ದಿನಾಂಕ 07.12.2023 ಗುರುವಾರದಂದು ಮಧ್ಯಾಹ್ನ 3.00 ಗಂಟೆಗೆ ಚಾಮರಾಜನಗರ ಉಪವಿಭಾಗದ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ. ಚಾಮರಾಜನಗರ–ಕೊಡಗು ರವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:–**

1. ಶ್ರೀ ಸೋಮಶೇಖರ್ ಎಂ.ಕೆ : ಅ.ಇಂ(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಚಾ.ನಗರ–ಕೊಡಗು
2. ಶ್ರೀ. ವಸಂತಕುಮಾರ್ ಆರ್ : ಕಾ.ನಿ.ಇಂ(ವಿ),ಚಾಮರಾಜನಗರ ವಿಭಾಗ
3. ಶ್ರೀ. ಭಾಸ್ಕರ್ ಆರ್. : ಲೆಕ್ಕಾಧಿಕಾರಿಗಳು, ಚಾಮರಾಜನಗರ ವಿಭಾಗ
4. ಶ್ರೀ ಸುರೇಶ್ ಎಂ. : ಸ.ಕಾ.ನಿ.ಇಂ(ವಿ), ಚಾಮರಾಜನಗರ ಉಪವಿಭಾಗ
5. ಶ್ರೀ ಸಿ.ಎಸ್.ಪ್ರವೀಣ್ : ಸ.ಇಂ(ವಿ), ನಗರ ಶಾಖೆ
6. ಶ್ರೀ. ಪ್ರವೀಣ್ ಕೆ.ಬಿ : ಪ್ರ.ಸ.ಇಂ(ತಾ), ತಾಂತ್ರಿಕ ಶಾಖೆ
7. ಶ್ರೀ. ಮಂಜುನಾಥ ಹೆಚ್.ಟಿ : ಪ್ರ.ಸ,ಲೆ(ಕಂ) , ಚಾಮರಾಜನಗರ ಉಪವಿಭಾಗ
8. ಶ್ರೀ ಮಂಜುನಾಥ : ಕಿ.ಇಂ(ವಿ), ರಾಮಸಮುದ್ರ ಶಾಖೆ
9. ಶ್ರೀ ಚಂದ್ರನಾಯ್ಕ್ : ಕಿ.ಇಂ(ವಿ), ಮಾದಾಪುರ ಶಾಖೆ
10. ಶ್ರೀ ಮಹದೇವಸ್ವಾಮಿ ಕೆ.ಎಂ : ಕಿ.ಇಂ(ವಿ), ಬದನಗುಪ್ಪೆ ಶಾಖೆ

ಅದೀಕ್ಷಕಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನಸಂಪರ್ಕ ಸಭೆ ಆಯೋಜಿಸಿ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಚಾಮರಾಜನಗರ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರ. ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಶ್ರೀ ಮರಿಸ್ವಾಮಿ, ಕಾಗಲವಾಡಿ ಗ್ರಾಮ, ಚಾಮರಾಜನಗರ | * ದೂರು ಸಂತೇಮರಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಿದ್ದು, ಚಂದಕವಾಡಿ ಗ್ರಾಮವು, ಸಂತೇಮರಳ್ಳಿ ಉಪವಿಭಾಗಕ್ಕೆ ದೂರವಿರುವುದರಿಂದ, ಚಂದಕವಾಡಿ ಶಾಖೆಯನ್ನು ಚಾಮರಾಜನಗರ ಉಪ ವಿಭಾಗಕ್ಕೆ ಸೇರಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು, ಉಪವಿಭಾಗಗಳ ವಿಂಗಡಣೆಯು ಸ್ಥಾವರಗಳ ಆಧಾರದಲ್ಲಿ ವಿಭಜಿಸಲಾಗಿದ್ದು, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. |

| | | | |
|---|---|---|---|
| 2 | ಶ್ರೀ ಮರಿಸ್ವಾಮಿ, ಕಾಗಲವಾಡಿ ಗ್ರಾಮ, ಚಾಮರಾಜನಗರ | * ದೂರು ಸಂತೇಮರಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಿದ್ದು, ಕುಂಭೇಶ್ವರ ಕಾಲೋನಿಯಲ್ಲಿರುವ ಕುಡಿಯುವ ನೀರಿನ ಸ್ಥಾವರದ ಹೆಚ್.ಟಿ. ಲೈನ್‌ನ ಕೆಳಗೆ ತೆಂಗಿನ ಗಿಡ/ ಮರಗಳರುತ್ತವೆ. ಸದರಿ ಹೆಚ್.ಟಿ. ಲೈನ್ ಅನ್ನು ಬೇರೆ ಜಾಗಕ್ಕೆ ಬದಲಾಯಿಸಲು ಕೊರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ, ಸ್ಥಳ ಪರಿಶೀಲಿಸಿ 3 ದಿನದೊಳಗಾಗಿ ವರದಿ ನೀಡಲು, ಕರೆ ಮಾಡಿ ತಿಳಿಸಿರುತ್ತಾರೆ. |
| 3 | ಶ್ರೀ.ಸ್ವಾಮಿ ಚಿಕ್ಕ ಮೂಡಲಹಳ್ಳಿ ಗ್ರಾಮ | * ದೂರು ಹರದನಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಿದ್ದು, ಐಪಿ ಸೆಟ್ಟಿಗೆ 27.9.2023 ರಂದು ಇಂಟಿಮೇಶನ್ ಹಣ ಪಾವತಿಸಿರುತ್ತಾರೆ. ಶ್ರೀಯುತರು, ಯು.ಎನ್.ಐ.ಪಿ ಯೋಜನೆಯಡಿ ಪರಿವರ್ತಕವನ್ನು ಅಳವಡಿಸಿ, ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ)ರವರು, ರಾಜ್ಯ ಸರ್ಕಾರದ ಆದೇಶದಂತೆ, ದಿನಾಂಕ 22.09.2023 ರ ನಂತರದ ಯಾವುದೇ ಐ.ಪಿ ಸ್ಥಾವರಗಳಿಗೆ, ಸೋಲಾರ್ ಪಂಪ್‌ಸೆಟ್ ಅಳವಡಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. |
| 4 | ಶ್ರೀ. ಮಂಜುನಾಥ ಉಡಿಗಾಲ ಗ್ರಾಮ | * ದೂರು ಹರದನಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಿದ್ದು, ಹೊಸ 66/11 ಕೆ ವಿ ಉಡಿಗಾಲ ವಿದ್ಯುತ್ ಉಪ ಕೇಂದ್ರವು ಯಾವಾಗ ಕಾರ್ಯ ಆರಂಭಗೊಳ್ಳುತ್ತದೆ ಎಂದು ತಿಳಿಸಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ)ರವರು, ಹೊಸ 66/11 ಕೆ ವಿ ಉಡಿಗಾಲ ವಿದ್ಯುತ್ ಉಪ ಕೇಂದ್ರಕ್ಕೆ ಸಂಬಂಧಪಟ್ಟ ಕೆಲಸಗಳು ಈಗಾಗಲೇ ಚಾಲನೆಯಲ್ಲಿರುತ್ತವೆ ಎಂದು ತಿಳಿಸಿರುತ್ತಾರೆ. |
| 5 | ಶ್ರೀ ನಾಗರಾಜು ಮೂಡಲಪುರ ಗ್ರಾಮ | * ಜನ ಸಂಪರ್ಕ ಸಭೆಯನ್ನು ನಡೆಸುವ ಮೊದಲು ರೈತರ Whatsapp ಗ್ರೂಪ್‌ಗಳಲ್ಲಿ ತಿಳಿಸಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ)ರವರು, ಉಪವಿಭಾಗಾಧಿಕಾರಿಗಳಿಗೆ ಗ್ರಾಮೀಣ ಭಾಗದಲ್ಲಿ, ಶಾಖಾ ವ್ಯಾಪ್ತಿಯ ರೈತರ Whatsapp ಗ್ರೂಪ್‌ಗಳಲ್ಲಿ ಹಂಚಲು ತಿಳಿಸಿರುತ್ತಾರೆ.. |
| 6 | ಶ್ರೀ ನಾಗರಾಜು ಮೂಡಲಪುರ ಗ್ರಾಮ | * ಗುಂಪು ಮನೆಗಳಿರುವಲ್ಲಿ ವಿದ್ಯುತ್ ಸಂಪರ್ಕವನ್ನು ಎಲ್ಲಾ ಮನೆಗಳಿಗೆ ನಿಲ್ಲಿಸಬಾರದೆಂದು ಕೋರಿರುತ್ತಾರೆ. ಯಾವ ಮನೆಯವರು ಹಣ ಪಾವತಿಸಿರುವುದಿಲ್ಲವೋ ಆ ಮನೆಯ ವಿದ್ಯುತ್ ಸಂಪರ್ಕವನ್ನು ನಿಲುಗಡೆ ಮಾಡಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ) ರವರು ಎಲ್ಲಾ ಶಾಖಾಧಿಕಾರಿಗಳಿಗೆ, ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದರು. |
| 7 | ಶ್ರೀ ಆರ್ ವಾಸು, ಚಿಕ್ಕ ಅಂಗಡಿ ಬೀದಿ ಚಾಮರಾಜನಗರ | * ಆರ್ ಆರ್ ಸಂಖ್ಯೆ CHNC-2292 ಸ್ಥಾವರದ ವಿದ್ಯುತ್ ಬಿಲ್ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಲೆಕ್ಕಾಧಿಕಾರಿಗಳಿಗೆ, 2 ದಿನದೊಳಗಾಗಿ ವಿದ್ಯುತ್ ಬಿಲ್ ನೀಡಲು ಸೂಚಿಸಿದರು. |
| 8 | ಶ್ರೀಮತಿ ಜರೀನಾ ಮಸ್ಕೂದ್ ಗಾಳಿಪುರ | * ಗೃಹಜ್ಯೋತಿ ಯೋಜನೆ ಅಡಿಯಲ್ಲಿ 58 ಯೂನಿಟ್ ಮಾತ್ರ ಫ್ರೀ ಬರುತ್ತಿದೆ. ಆದರೆ ವಾರ್ಷಿಕ ಸರಾಸರಿ ಬಳಕೆಯಾಗಿ ಹೆಚ್ಚು ವಿದ್ಯುತ್ ಬಳಸುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಲೆಕ್ಕಾಧಿಕಾರಿಗಳಿಗೆ, 22-23ನೇ ಸಾಲಿನ ಸರಾಸರಿ ಬಳಕೆಯನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದರು. |
| 9 | ಶ್ರೀ ಪ್ರಭು ರವರು ಚಾಮರಾಜನಗರ | * ಆರ್.ಆರ್ C-12054 ಸೆಪ್ಟಂಬರ್ ಮಾಹೆಯಲ್ಲಿ ಮಾಪಕ ಬದಲಾವಣೆ ಮಾಡಿ, 3 (ಜುಲೈ ಆಗಸ್ಟ್ ಸೆಪ್ಟಂಬರ್) ಮಾಹೆಯ ಬಿಲ್ಲನ್ನು ಒಂದೇ ಬಾರಿ ನೀಡಿರುತ್ತಾರೆ. ಸದರಿ ಬಿಲ್ಲನ್ನು ಸರಾಸರಿಯಾಗಿ ಪರಿವರ್ತಿಸಿ ಕೊಡುವ ಬಗ್ಗೆ ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಲೆಕ್ಕಾಧಿಕಾರಿಗಳಿಗೆ, ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದರು. |

| | | | |
|---|---|---|---|
| 10 | ಶ್ರೀ. ರಾಚಶೆಟ್ಟಿ, ತೇಜು ಎಲೆಕ್ಟ್ರಿಕಲ್ಸ್, ಚಾಮರಾಜನಗರ | * ತಾತ್ಕಾಲಿಕ ಸ್ಥಾವರವನ್ನು ಹಿಂದಿರುಗಿಸಿದಾಗ ಹಣವನ್ನು ಶೀಘ್ರವಾಗಿ ಹಿಂದಿರುಗಿಸಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ) ರವರು ಸಹಾಯಕ ಲೆಕ್ಕಾಧಿಕಾರಿಗಳಿಗೆ, ನಿಯಮಾನುಸಾರ, ಹಣವನ್ನು ಹಿಂದಿರುಗಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು. |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,
ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾಮರಾಜನಗರ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಚಾಮರಾಜನಗರ ಉಪವಿಭಾಗ ರವರ ಮಾಹಿತಿಗಾಗಿ: ಹಾಗೂ ದೂರುಗಳ ಪರಿಹಾರಕ್ಕೆ ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.